**ಸಿ.ಸಿ. ನಂಃ 2/2011**

**ಪಿ.ಡಬ್ಲ್ಯೂ-01**

# ಸಿವಿಲ್ ಜಡ್ಜ್ ಮತ್ತು ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಗ್ಗಡದೇವನಕೋಟೆ.

## <u>ಸಿ.ಸಿ. ನಂಃ 2/2011</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಜಿ.ವಿ. ಗೌರಿಶಂಕರ | ಪಿ.ಡಬ್ಲ್ಯೂ-01 |
| ತಂದೆಯ ಹೆಸರು | : | ಜಿ. ವೆಂಕಟೇಶ್ | |
| ವಯಸ್ಸು | : | 55 ವರ್ಷ | |
| ಉದ್ಯೋಗ | : | ಎ.ಎಸ್.ಐ.<br>ಹೆಚ್.ಡಿ.ಕೋಟೆ ಪೋಲಿಸ್ ಠಾಣೆ | ಸಾಕ್ಷಿಗೆ ಪ್ರಮಾಣ ವಚನ ಭೋದಿಸಿದ<br>ದಿನಾಂಕಃ **30.01.2023** |
| ವಾಸಸ್ಥಳ | : | ಹೆಗ್ಗಡದೇವನಕೋಟೆ | ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷಿಯ ಹೇಳಿಕೆ. |

**<u>ಮುಖ್ಯ ವಿಚಾರಣೆಃ ಎ.ಪಿ.ಪಿ. ರವರಿಂದಃ</u>**

ನಾನು ದಿನಾಂಕಃ 15.01.2017 ರಿಂದ ಹೆಗ್ಗಡದೇವನಕೋಟೆಯ ಪೋಲಿಸ್ ಠಾಣೆಯಲ್ಲಿ ಎ.ಎಸ್.ಐ.ಆಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ.

ಈ ಪ್ರಕರಣದಲ್ಲಿ ನ್ಯಾಯಾಲಯವು 2 ರಿಂದ 5ನೇ ಆರೋಪಿಗಳ ವಿರುದ್ಧ ಹೊರಡಿಸಿದಂತಹ ಉದ್ಘೋಷಣಾ ಮತ್ತು ಜಪ್ತಿ ವಾರೆಂಟ್ ನ್ನು ದಿನಾಂಕಃ 05.07.2021 ರಂದು ಸ್ವೀಕರಿಸಿ, ದಿನಾಂಕಃ 07.08.2021 ರಂದು ಅವರು ವಾಸ ಮಾಡುತ್ತಿದ್ದಾರೆ ಎಂದು ಹೇಳಲಾದ ತಮಿಳುನಾಡು ರಾಜ್ಯದ ಹೊಸೂರು ಪಟ್ಟಣದ ಮುಂಭಾಗ ತಮಿಳು ಮತ್ತು ಕನ್ನಡ ಭಾಷೆಯನ್ನು ತಿಳಿದಿದ್ದ ಪಳನಿಸ್ವಾಮಿರವರ ಮುಖಾಂತರ ಸಾರ್ವಜನಿಕರು, ಪಂಚಾಯಿತಿದಾರರು ಮತ್ತು ಬಾತ್ಮೀದಾರನ್ನು ಬರಮಾಡಿಕೊಂಡು ವಿಚಾರಣೆ ಮಾಡಿರುತ್ತೇನೆ. ಆರೋಪಿಗಳು ಹೀಗೆ **02-03** ವರ್ಷಗಳ ಟೆಲಿಫೋನ್ ವಿನಿಮಯ ಕೇಂದ್ರ ವಸತಿಗೃಹವನ್ನು ಖಾಲಿ ಮಾಡಿಕೊಂಡು ಹೊರಟು ಹೋಗಿರುತ್ತಾರೆಂದು ತಿಳಿಸಿರುತ್ತಾರೆ. ನಂತರ ಆರೋಪಿಗಳ ವಿರುದ್ಧ ನ್ಯಾಯಾಲಯವು ಹೊರಡಿಸಿದ್ದಂತಹ ಉದ್ಘೋಷಣಾ ಮತ್ತು ಜಪ್ತಿ ವಾರೆಂಟ್ ನ ಬಗ್ಗೆ

ಪಳನಿಸ್ವಾಮಿಯವರ ಮುಖಾಂತರ ಸಾರ್ವಜನಿಕರಿಗೆ ಮಾಹಿತಿಯನ್ನು ಕೊಟ್ಟಿರುತ್ತೇನೆ. ಆರೋಪಿಗಳು ತಲೆ ಮರೆಸಿಕೊಂಡಿರುವ ಬಗ್ಗೆ ಟಂಟಂ ಮಾಡಿಸಿ, ಸ್ಥಳದಲ್ಲಿ ಮಹಜರ್ ಕ್ರಮವನ್ನು ಜರುಗಿಸಿ, ನಂತರ ಆರೋಪಿಗಳ ವಿರುದ್ಧ ಹೊರಡಿಸಲಾದ ಉದ್ಘೋಷಣಾ ಪ್ರತಿಯನ್ನು ತಮಿನಾಡಿನ ಹೊಸೂರು ಪಟ್ಟಣದ ಮುನ್ಸಿಫಲ್ ಕೌನ್ಸಿಲ್ ಮುಂಭಾಗದ ಕಾಂಪೌಂಡ್ ಗೋಡೆಗೆ ಅಂಟಿಸಿರುತ್ತೇನೆ. ನಂತರ ಆರೋಪಿಗಳು ಎಲ್ಲಿಯಾದರೂ ಕಂಡು ಬಂದಲ್ಲಿ ಹತ್ತಿರದ ಪೋಲಿಸ್ ಠಾಣೆಗಾಗಲೀ ಅಥವಾ ನ್ಯಾಯಾಲಯಕ್ಕೆ ತಿಳಿಸುವಂತೆ ಮನವಿ ಮಾಡಿರುತ್ತೇನೆ.

ನಂತರ ದಿನಾಂಕ: 09.08.2021 ರಂದು ನ್ಯಾಯಾಲಯದ ಆವರಣದ ಮುಂಭಾಗ ಆರೋಪಿಗಳ ಬಗ್ಗೆ ಸಾರ್ವಜನಿಕರಲ್ಲಿ ವಿಚಾರ ಮಾಡಲಾಗಿ, ಯಾರಿಗೂ ಸಹ ಆರೋಪಿಗಳ ಬಗ್ಗೆ ವಿಚಾರ ತಿಳಿದಿರುವುದಿಲ್ಲ ಎಂದು ತಿಳಿಸಿರುತ್ತಾರೆ. ನಂತರ ಸಾರ್ವಜನಿಕರಿಗೆ ಆರೋಪಿಗಳ ವಿರುದ್ಧ ನ್ಯಾಯಾಲಯವು ಹೊರಡಿಸದಂತಹ ಉದ್ಘೋಷಣಾ ಮತ್ತು ಜಪ್ತಿ ವಾರೆಂಟ್‌ನ ಬಗ್ಗೆ ತಿಳಿಸಿರುತ್ತೇನೆ. ನಂತರ ನ್ಯಾಯಾಲಯದ ಆವರಣದ ಮುಂಭಾಗ ಟಂಟಂ ಮಾಡಿಸಿ, ಮಹಜರ್ ಕ್ರಮವನ್ನು ಜರುಗಿಸಿ, ಉದ್ಘೋಷಣಾ ಪ್ರತಿಯನ್ನು ನ್ಯಾಯಾಲಯದ ಕಾಂಪೌಂಡ್ ಗೋಡೆಗೆ ಅಂಟಿಸಿರುತ್ತೇನೆ. ನಂತರ ಆರೋಪಿಗಳು ಎಲ್ಲಿಯಾದರೂ ಕಂಡುಬಂದಲ್ಲಿ ಹತ್ತಿರದ ಪೋಲಿಸ್ ಠಾಣೆಗಾಗಲೀ ಅಥವಾ ನ್ಯಾಯಾಲಯಕ್ಕೆ ತಿಳಿಸುವಂತೆ ಮನವಿ ಮಾಡಿರುತ್ತೇನೆ.

ಆರೋಪಿಗೆ ಸಂಬಂಧಿಸಿದ ಚರಾಸ್ತಿ ಮತ್ತು ಸ್ಥಿರಾಸ್ತಿಗಳ ಬಗ್ಗೆ ದಿನಾಂಕ: 13.10.2020 ರಂದು ತಮಿಳುನಾಡಿನ ಹೊಸೂರು ಪಟ್ಟಣದ ಮುನ್ಸಿಫಲ್ ಕಾರ್ಪೋರೇಷನ್ ರವರಿಗೆ ಮನವಿಯನ್ನು ಸಲ್ಲಿಸಿರುತ್ತೇನೆ. ನಂತರ ದಿನಾಂಕ: 08.10.2021 ರಂದು ಆರೋಪಿಗಳ ಹೆಸರಿನಲ್ಲಿ ಯಾವುದೇ ಚರ ಮತ್ತು ಸ್ಥಿರ ಆಸ್ತಿಗಳು ಇರುವುದಿಲ್ಲ ಎಂಬ ವರದಿಯನ್ನು ಸ್ವೀಕರಿಸಿರುತ್ತೇನೆ ಅದನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**ಸಿ.ಸಿ. ನಂಃ 2/2011**

**ಪಿ.ಡಬ್ಲ್ಯೂ-01**

ಸದರಿ ಆರೋಪಿಗಳಿಗೆ ಸಂಬಂಧಿಸಿದಂತೆ ದಿನಾಂಕಃ 07.08.2021 ರಂದು ತಮಿಳುನಾಡಿನ ಹೊಸೂರು ಪಟ್ಟಣದ ಮುನ್ಸಿಫಲ್ ಕಾರ್ಪೊರೇಷನ್ ಮುಂಭಾಗ ಮಾಡಲಾದ ಮಹಜರ್ ಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ.-1 ರಿಂದ ನಿ.ಪಿ.-4 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿ.ಪಿ.-1(ಎ) ರಿಂದ ನಿ.ಪಿ.-4(ಎ) ಎಂದು ಗುರುತಿಸಲಾಯಿತು. ದಿನಾಂಕಃ 09.08.2021 ರಂದು ನ್ಯಾಯಾಲಯದ ಆವರಣದ ಮುಂಭಾಗ ಮಾಡಿದ ಮಹಜರ್ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ.-5 ರಿಂದ ನಿ.ಪಿ.-8 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿ.ಪಿ.-5(ಎ) ರಿಂದ ನಿ.ಪಿ.-8(ಎ) ಎಂದು ಗುರುತಿಸಲಾಯಿತು. ದಿನಾಂಕಃ 08.09.2021 ರಂದು ತಮಿಳುನಾಡಿನ ಹೊಸೂರು ಪಟ್ಟಣದ ಮುನ್ಸಿಫಲ್ ಕಾರ್ಪೊರೇಷನ್ ರವರಿಗೆ ನೀಡಲಾದ ಮನವಿ ಪತ್ರಗಳನ್ನು ಕ್ರಮವಾಗಿ ನಿ.ಪಿ-9 ರಿಂದ ನಿ.ಪಿ.-12 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿ.ಪಿ.-9(ಎ) ರಿಂದ ನಿ.ಪಿ.-12(ಎ) ಎಂದು ಗುರುತಿಸಲಾಯಿತು. ದಿನಾಂಕಃ 08.10.2021 ರಂದು ತಮಿಳುನಾಡಿನ ಹೊಸೂರು ಪಟ್ಟಣದ ಮುನ್ಸಿಫಲ್ ಕಾರ್ಪೊರೇಷನ್ ರವರು ನೀಡಿದ 04 ಪತ್ರಗಳನ್ನು ಕ್ರಮವಾಗಿ ನಿ.ಪಿ.-13 ರಿಂದ ನಿ.ಪಿ.-16 ಎಂದು ಗುರುತಿಸಲಾಯಿತು.

**ಆರೋಪಿಗಳು ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದು, ಅವರ ವಿರುದ್ಧ ಸಮನ್ಸ್, ವಾರೆಂಟ್, ಉದ್ಘೋಷಣೆ ಮತ್ತು ಜಪ್ತಿ ವಾರೆಂಟ್ ಹೊರಡಿಸಿದ್ದರೂ ಅವರ ಹಾಜರಾತಿಯನ್ನು ಪಡೆಯಲಾಗಿಲ್ಲ, ಆದ್ದರಿಂದ ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 299 ರ ಅಡಿಯಲ್ಲಿ ಈ ಮೇಲಿನಂತೆ ಸಾಕ್ಷಿಯ ಹೇಳಿಕೆಯನ್ನು ದಾಖಲು ಮಾಡಿಕೊಳ್ಳಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**